# ಜ್ಞಾನಶಕ್ತಿ
## ಮಾಸ ಪತ್ರಿಕೆ
## JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೩ | ನೋಂದಣಿ ಸಂಖ್ಯೆ : KARBIL / 2005 / 16123 | ಮೇ - 2014 | ಸಂಚಿಕೆ ೫


# "ಶ್ರುತಿ ಸ್ಮೃತಿ ಪುರಾಣಾನಾಂ ಆಲಯಂ ಕರುಣಾಲಯಂ"

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಶಂಕರ ಜಯಂತಿ"






ಶ್ರೀ ಸಭಾದ ವತಿಯಿಂದ ತಾ. 3–5–2014ರ ಶನಿವಾರದಂದು ಶಂಕರ ಜಯಂತಿಯನ್ನು ಭಕ್ತಿಪೂರ್ವಕ ಹಾಗೂ ಶ್ರದ್ಧೆಯಿಂದ ಆಚರಿಸಲಾಯಿತು. ಸಂಜೆ ವಿವಿಧ ಪಾರಾಯಣಗಳಿಂದ ಮೊದಲ್ಗೊಂಡು ಶ್ರೀ ದುರ್ಗಾ ನಮಸ್ಕಾರ ಪೂಜೆಯ ಸಂಕಲ್ಪ ನಡೆಯಿತು. ಡಾ. ಎ. ಪಿ. ಕೃಷ್ಣ ಮತ್ತು ಶ್ರೀಮತಿ ಸುಮನಾರವರು ಪೂಜೆಯ ಯಜಮಾನತ್ವ ವಹಿಸಿಕೊಂಡಿದ್ದರು. ಅನಂತರ ಕುಮಾರಿ ಸೌಂದರ್ಯಲಕ್ಷ್ಮೀ ಹಾಗೂ ಕುಮಾರಿ ವೈಭವಲಕ್ಷ್ಮೀಯವರು ವಿವಿಧ ಸ್ತೋತ್ರಗಳನ್ನು ಉತ್ತಮ ಏರಿಳಿತಗಳೊಂದಿಗೆ ಹಾಡಿದರು. ಮಿತ್ರಸಮಾಗಮ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕಾತ್ಯಾಯಿನಿ ರಾವ್‌ರವರು ಶಂಕರ ಭಗವತ್ಪಾದರ ಜೀವನಚರಿತ್ರೆ, ಅದ್ವೈತಮತದ ವಿಶಿಷ್ಟತೆ ಹಾಗೂ ಜಗತ್ತಿಗೆ ಅವರು ನೀಡಿದ ಕೊಡುಗೆಗಳ ಬಗ್ಗೆ ಸವಿವರವಾಗಿ ತಿಳಿಸಿದರು. ಮಹಿಳಾ ವೇದಿಕೆ ಉಪಾಧ್ಯಕ್ಷೆ ಶ್ರೀಮತಿ ಅರುಣಾ ಸೋಮಶೇಖರ್ ಹಾಗೂ ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರ್ವಹಿಸಿದರೆ, ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಎಂ. ಆರ್. ವಾಸುದೇವರವರು ಕಾರ್ಯಕ್ರಮ ಸಂಯೋಜಿಸಿದರು. ಶ್ರೀ ಬಾಲಕೃಷ್ಣ ಹಾಗೂ ಪುಷ್ಪಲತಾ ದಂಪತಿಗಳು ಪ್ರಸಾದ ಭೋಜನವನ್ನು ಪ್ರಾಯೋಜಿಸಿದ್ದರು.

*ವರದಿ : **ಪಿ. ಶ್ರೀಕಾಂತ್ ರಾವ್*** *ಚಿತ್ರ : **ರಘುವೀರ್ ಪೆರ್ಡೂರು***

## ಶಂಕರತತ್ವ ಪ್ರಸಾರ – ಅಭಿಯಾನಂ, ಜಿಲ್ಲಾ ಸಮಿತಿ ವತಿಯಿಂದ "ಶಂಕರ ಜಯಂತಿ"

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಗ್ಗೆ ಶತರುದ್ರಾಭಿಷೇಕ, ವೇದ, ಉಪನಿಷತ್ತು, ಪುರಾಣ, ಭಗವದ್ಗೀತೆ ಪಾರಾಯಣ ಮತ್ತು ಶಂಕರ ಸ್ತೋತ್ರ–ವಿಷ್ಣು ಲಲಿತಾಸಹಸ್ರನಾಮ ಪಾರಾಯಣ, ಸೌಂದರ್ಯಲಹರಿ, ಶಂಕರ ಸ್ತೋತ್ರಗಳ ಸಾಮೂಹಿಕ ಪಠಣ ನಡೆಯಿತು. ಅನಂತರ ವಿದ್ವಾನ್ ಶ್ರೀ ಸತ್ಯಕೃಷ್ಣ ಭಟ್ಟರವರು ತಮ್ಮ ಅಪ್ರತಿಮ ವಾಗ್ಝರಿಯಿಂದ ಶ್ರೀ ಶಂಕರತತ್ವ ಮತ್ತು ಸಂದೇಶಗಳ ಬಗ್ಗೆ ಪ್ರವಚನ ನೀಡಿದರು. ಅನಂತರ ಭಜನೆ, ವಿಶೇಷ ಪೂಜೆಗಳು ನಡೆದು ಪ್ರಸಾದ ಭೋಜನ ನೀಡಲಾಯಿತು. ಮಧ್ಯಾಹ್ನ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಶ್ರೀ ಸಭಾದ ಶ್ರೀಮತಿ ಜಯಲಕ್ಷ್ಮೀ ಪ್ರಸನ್ನ ಕುಮಾರ್ ಪ್ರಾರ್ಥನೆ ಮತ್ತು ಶ್ರೀಮತಿ ಸುಶೀಲಾ ವಿದ್ಯಾರಣ್ಯ ಶಂಕರ ಮತ್ತು ಶಾರದೆಯ ಬಗ್ಗೆ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಶ್ರೀಮತಿ ರಜನೀ ಸಂತೋಷ್ ಕುಮಾರರವರು ತಮ್ಮ ಅಪ್ರತಿಮ ಕೊಳಲುವಾದನದಿಂದ ಸಭಿಕರು ಮಂತ್ರಮುಗ್ಧರಾಗುವಂತೆ ಮಾಡಿದರು. ಅನಂತರ ಶ್ರೀಮತಿ ವಸುಧಾ ನಾಯಕ್ ಮತ್ತು ಬಳಗ, ಸಮತಾ ಬಳಗ, ಕೂಟ ಮಹಾಜಗತ್ತು, ಮಹಿಳಾ ವೇದಿಕೆ, ವಿಪ್ರಸಮಾಗಮ ವೇದಿಕೆಗಳ ವತಿಯಿಂದ ವಿವಿಧ ಕಾರ್ಯಕ್ರಮಗಳು ನಡೆದುವು. ಸಂಚಾಲಕರಾದ ಶ್ರೀ ಕರುಣ್ ರಾವ್ ಬೆಳ್ಳೆ ಮತ್ತು ಅಗರ ಶ್ರೀಧರ್ ಶಾಸ್ತ್ರಿಗಳು ಕಾರ್ಯಕ್ರಮ ಸಂಯೋಜಿಸಿದರೆ, ಶ್ರೀ ಪಿ. ಶ್ರೀಕಾಂತ್ ರಾವ್ ಹಾಗೂ ಶ್ರೀ ಸುರೇಶ್ ಕಡಬ ಕಾರ್ಯಕ್ರಮ ನಿರ್ವಹಿಸಿದರು.

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಮಂಗಳೂರು

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ದಿನಾಂಕ 31–3–2014ರಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ರೂ. 1712 ಲಕ್ಷಗಳ ಠೇವಣಿಯನ್ನು ಸಂಗ್ರಹಿಸಿ ದಾಖಲೆಯನ್ನು ನಿರ್ಮಿಸಿದೆ ಹಾಗೂ ತಾನು ಹಾಕಿಕೊಂಡ ಗುರಿಯನ್ನು ರೂ. 12 ಲಕ್ಷದಿಂದ ಮೀರಿಸಿದೆ. ಅಂತೆಯೇ ಸಂಘವು ರೂ. 1400 ಲಕ್ಷ ಸಾಲವನ್ನು ತನ್ನ ಸದಸ್ಯರಿಗೆ ವಿತರಿಸಿದೆ. 2013–2014ನೇ ಸಾಲಿಗೆ ಸಂಘವು ರೂ. 25 ಲಕ್ಷ ನಿವ್ವಳ ಲಾಭವನ್ನು ಸಂಪಾದಿಸಿದೆ. ಈ ಪ್ರಗತಿಗೆ ಕಾರಣರಾದ ಎಲ್ಲಾ ಸದಸ್ಯರಿಗೆ ಹಾಗೂ ಸಮಾಜ ಬಾಂಧವರಿಗೆ ನಮ್ಮ ಕೃತಜ್ಞತೆಗಳು ಹಾಗೂ ಶುಭಾಶಯಗಳು. ಮುಂದಿನ ವರ್ಷದಲ್ಲಿ ನಾವು ಇನ್ನೂ ಹೆಚ್ಚು ಪ್ರಗತಿ ಸಾಧಿಸಲು ಎಲ್ಲರ ಸಹಕಾರವನ್ನು ನಿರೀಕ್ಷಿಸುತ್ತೇವೆ.

***ಅಧ್ಯಕ್ಷರು** ಮತ್ತು **ಆಡಳಿತ ಮಂಡಳಿಯ ಸದಸ್ಯರು***


## ವಿದೇಶ ಪ್ರಯಾಣ



### ಶ್ರೀ ಅಡೂರು ಉದಯಕುಮಾರ್

ಶ್ರೀರಾಮ್ ಫೋರ್‌ಚ್ಯೂನ್ ಸೊಲ್ಯೂಷನ್ ಲಿಮಿಟೆಡ್‌ನಲ್ಲಿ ವಸತಿ ಪ್ರತಿನಿಧಿಯಾಗಿ ಕಳೆದ 17 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶ್ರೀ ಅಡೂರು ಉದಯಕುಮಾರ್‌ರವರು ಕಂಪನಿಯಿಂದ ಪುರಸ್ಕೃತಗೊಂಡು ನ್ಯೂಜಿಲ್ಯಾಂಡಿನ ಆಕ್‌ಲೆಂಡ್‌ನಲ್ಲಿ ನಡೆಯುವ ಸಮ್ಮೇಳನದಲ್ಲಿ ಭಾಗವಹಿಸಲು ಮೇ 16ರಂದು ಮಲೇಶ್ಯಾ ಮಾರ್ಗವಾಗಿ ಪ್ರಯಾಣ ಬೆಳೆಸುತ್ತಿದ್ದಾರೆ. ಅವರ ಈ ಪ್ರಯಾಣವು ಸುಖಕರವಾಗಲಿ ಹಾಗೂ ತಮ್ಮ ವೃತ್ತಿಯಲ್ಲಿ ಅವರು ಇನ್ನಷ್ಟು ಶ್ರೇಯಸ್ಸನ್ನು ಪಡೆಯಲಿ ಎಂದು ಹಾರೈಸುವ–

**ಶ್ರೀಮತಿ ಸಂಧ್ಯಾ ಉದಯಕುಮಾರ್** **"ಸದನದ ಕಲಾವಿದರು"**
**ತನುಶ್ರೀ** (ಮಗಳು) **ಮಂಗಳೂರು**


## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,

ಯಶಸ್ವಿ 3ನೇ ವರುಷದಲ್ಲಿ ಸಾಗುತ್ತಿರುವ 'ಜ್ಞಾನಶಕ್ತಿ' ಮಾಸಪತ್ರಿಕೆಯನ್ನು ಸದಾಕಾಲ ನಿಮಗೆ ನೀಡುವ ಉದ್ದೇಶದಿಂದ ಪತ್ರಿಕೆಗೆ ಈ ಕೆಳಗಿನಂತೆ ಚಂದಾದರವನ್ನು ನಿಗದಿಪಡಿಸಲಾಗಿದೆ.



| | | | |
|---|---|---|---|
| **ಮಹಾ ಪೋಷಕರು** | – | ರೂ. | **10,000/-** |
| **ಪೋಷಕರು** | – | ರೂ. | **5,000/-** |
| **ಆಜೀವ ಚಂದಾ ದರ** | – | ರೂ. | **500/-** |

ಚೆಕ್ ಅಥವಾ ಡಿ.ಡಿ.ಗಳನ್ನು 'ಜ್ಞಾನಶಕ್ತಿ' ಹೆಸರಿನ ಮೂಲಕ ಸುಬ್ರಹ್ಮಣ್ಯ ಸಭಾ (ರಿ.) ಕೊಡಿಯಾಲ್‌ಬೈಲ್, ಮಂಗಳೂರು - 575 003ಕ್ಕೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ***ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 09363361618.***

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್ ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**


# ಪ್ರತಿಷ್ಠಿತ ವಿದ್ಯಾಸಂಸ್ಥೆ ಅಂಬಿಕಾ ಸಮೂಹ ಸಂಸ್ಥೆಗಳಿಂದ ವಿದ್ಯಾಕ್ಷೇತ್ರಕ್ಕೆ ಇನ್ನೊಂದು ಕೊಡುಗೆ




ನಮ್ಮ ಸಮಾಜದ ಪ್ರತಿಷ್ಠಿತ ವಿದ್ಯಾಸಂಸ್ಥೆ ನಟ್ಟೋಜ ಫೌಂಡೇಶನ್ ಇದರ ವತಿಯಿಂದ ಐಸಿಎಸ್‌ಇ (ICSE) ಸಿಲೆಬಸ್‌ನ ಅಂಬಿಕಾ ಬಾಲವಿದ್ಯಾಲಯ ಕಿರಿಯ ಪ್ರಾಥಮಿಕ ಶಾಲೆಯು ದಿನಾಂಕ 7-5-2014ನೇ ಬುಧವಾರ ಲೋಕಾರ್ಪಣೆಗೊಂಡಿತು.

ಶ್ರೀ ಶಿವಾನಂದ ನಟ್ಟೋಜ, ಶ್ರೀ ಸುಬ್ರಹ್ಮಣ್ಯ ನಟ್ಟೋಜ, ಶ್ರೀಮತಿ ರಾಜಶ್ರೀ ನಟ್ಟೋಜ ಇವರ ನೇತೃತ್ವದಲ್ಲಿ ಪುತ್ತೂರಿನಲ್ಲಿ ನಡೆಯುತ್ತಿರುವ ಅಂಬಿಕಾ ಪದವಿಪೂರ್ವ ವಿದ್ಯಾಲಯವು ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಒಂದು ದೊಡ್ಡ ಹೆಸರು. ಈಗ ಐಸಿಎಸ್‌ಇ ಸಿಲೆಬಸ್‌ನ ಕಿರಿಯ ಪ್ರಾಥಮಿಕ ಶಾಲೆಯು ಪುತ್ತೂರು ತಾಲೂಕಿನ ಪ್ರಪ್ರಥಮ ವಿದ್ಯಾಸಂಸ್ಥೆಯಾಗಿದೆ.

ವಿದ್ಯಾಲಯದ ಲೋಕಾರ್ಪಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ನಗರಾಭಿವೃದ್ಧಿ ಸಚಿವ ಶ್ರೀ ವಿನಯ ಕುಮಾರ್ ಸೊರಕೆಯವರು "ಐಸಿಎಸ್‌ಇ ಪಠ್ಯಕ್ರಮದಿಂದ ಆಮೂಲಾಗ್ರವಾದ ಬದಲಾವಣೆಯ ವಿದ್ಯಾಭ್ಯಾಸದೊಂದಿಗೆ ಪರಿಸರಕ್ಕೆ ಬೆಳಕು ನೀಡುವ ಮೂಲಕ ಪುತ್ತೂರು ಮಾತ್ರವಲ್ಲ ಜಿಲ್ಲೆ ಹಾಗೂ ರಾಜ್ಯದಲ್ಲೇ **'ಅಂಬಿಕಾ'** ಅತ್ಯುತ್ತಮ ಶಿಕ್ಷಣ ಸಂಸ್ಥೆಯಾಗಲಿ" ಎಂದು ಹಾರೈಸಿದರು.

ಸಭಾಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕರಾದ ಶ್ರೀ ಉರಿಮಜಲು ರಾಮ ಭಟ್ ಮಾತನಾಡಿ "ಶಿಕ್ಷಣದಲ್ಲಿ ಮೌಲ್ಯವನ್ನು ಬೆಳೆಸುವ ಪ್ರಾಮಾಣಿಕ ಪ್ರಯತ್ನ ಆಗಬೇಕಾಗಿದ್ದು ಶಿಕ್ಷಣ ಕೊಡುವ ಭಾಷೆ ಯಾವುದೇ ಆಗಿರಲಿ ಮೌಲ್ಯಯುತ ಶಿಕ್ಷಣ ನೀಡುವುದೇ ನಮ್ಮ ಗುರಿಯಾಗಿರಲಿ" ಎಂದರಲ್ಲದೆ ಮುಂದೊಂದು ದಿನ ಭಾರತವು ಜಗದ್ಗುರು ಆಗಬೇಕೆಂದು ಹಾರೈಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪುತ್ತೂರು ವಿಧಾನಸಭಾ ಕ್ಷೇತ್ರದ ಶಾಸಕಿ ಶ್ರೀಮತಿ ಶಕುಂತಳಾ ಟಿ. ಶೆಟ್ಟಿಯವರು ಮಾತನಾಡಿ "ಜಿಲ್ಲೆಗೆ ಸಂಬಂಧಪಟ್ಟಂತೆ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು ಪುತ್ತೂರಿನಿಂದಲೂ ಮೂಡಿಬರಬೇಕು. ಈ ನಿಟ್ಟಿನಲ್ಲಿ ಪುತ್ತೂರಿನ ಚರಿತ್ರೆಯಲ್ಲಿ ಹೆಸರು ದಾಖಲಿಸುವ ಕೆಲಸ ಅಂಬಿಕಾ ವಿದ್ಯಾಲಯದಿಂದ ಆಗಲಿ" ಎಂದರು.

ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ಶ್ರೀ ಬೊಳ್ಳಾವ ಸತ್ಯಶಂಕರರವರು ಮಾತನಾಡಿ "ವಿದ್ಯೆ ಕೇವಲ ಜೀವನದ ಅಗತ್ಯಕ್ಕಾಗಿ ಇರುವ ಪಠ್ಯ ಮಾತ್ರ ಕಲಿಯಲು ಅಲ್ಲ. ಆಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನಾವು ಯಾವುದನ್ನು ಕಲಿಯಬೇಕಾಗಿದೆಯೋ ಅದು ಇಂದಿನ ಶಿಕ್ಷಣದಲ್ಲಿ ಸಿಗುತ್ತಿಲ್ಲ. ಬಾಲ್ಯದಿಂದಲೇ ಇಂತಹ ವಿಚಾರವನ್ನು ಕಲಿಸುವ ಶಿಕ್ಷಣ ಬೇಕಾಗಿದೆ" ಎಂದರು.

ಅಭ್ಯಾಗತರಾಗಿದ್ದ ಪುತ್ತೂರಿನ ಕ್ಷೇತ್ರಶಿಕ್ಷಣಾಧಿಕಾರಿ ಶ್ರೀ ಜಿ. ಎಸ್. ಶಶಿಧರ್, ಪುತ್ತೂರು ಪುರಸಭಾ ಮುಖ್ಯಾಧಿಕಾರಿ ಶ್ರೀ ಎಂ. ಎಚ್. ಸುಧಾಕರ್ ಸಂದರ್ಭೋಚಿತವಾಗಿ ಮಾತನಾಡಿ ಶುಭಹಾರೈಸಿದರು.

**'ಜ್ಞಾನಶಕ್ತಿ' ಬಳಗವು** ಸಂಸ್ಥೆಗೆ ಶುಭವನ್ನು ಹಾರೈಸುತ್ತದೆ.

***ವರದಿ : ಎಂ. ಎಸ್. ರಘುನಾಥ್ ರಾವ್***
***ಛಾಯಾಚಿತ್ರ : ಸುದರ್ಶನ್, ಪದ್ಮಾ ಸ್ಟುಡಿಯೋ, ಪುತ್ತೂರು***

# ಪಡುಬಿದ್ರಿಗೆ ಹೆಬ್ಬೂರು ಮಠಾಧೀಶರ ಭೇಟಿ



ದಿನಾಂಕ 26-03-2014ನೇ ಬುಧವಾರ ಸಂಜೆ ತುಮಕೂರು ತಾಲೂಕಿನ ಹೆಬ್ಬೂರು ಘನಪುರಿ ಸಂಸ್ಥಾನದ ಶ್ರೀ ಕೋದಂಡಾಶ್ರಮ ಮಠದ ಪೀಠಾಧಿಪತಿಗಳಾದ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ಪಡುಬಿದ್ರಿಯ ನಮ್ಮ ಸಮಾಜದ ಎರಡು ದೇವಾಲಯಗಳಿಗೆ ಭೇಟಿ ನೀಡಿದರು.

ಸುಮಾರು 125ಕ್ಕೂ ಮಿಕ್ಕಿದ ಸಮಾಜ ಬಾಂಧವರು ಇವರನ್ನು ಸ್ವಾಗತಿಸಿದರು. ಸ್ವಾಮೀಜಿಯವರು ಮೊದಲು ಪಾದೆಬೆಟ್ಟಿನ ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಭೇಟಿ ನೀಡಿದರು. ಅಲ್ಲಿ ದೇವಳದ ವತಿಯಿಂದ ಶ್ರೀಯುತ ಶ್ರೀನಿವಾಸ ಶರ್ಮ ದಂಪತಿಗಳು ಪಾದಪೂಜೆ ನೆರವೇರಿಸಿದರು. ಬಳಿಕ ಪಡುಬಿದ್ರಿಯ ಉದಯಾದ್ರಿ ಬಾಲಗಣಪತಿ-ಪ್ರಸನ್ನ ಪಾರ್ವತಿ ದೇವಸ್ಥಾನಕ್ಕೆ ಸ್ವಾಮಿಗಳನ್ನು ಪೂರ್ಣಕುಂಭ-ಕಲಶಗಳೊಂದಿಗೆ ಸ್ವಾಗತಿಸಿ ಕರೆತರಲಾಯಿತು. ಅಲ್ಲಿ ದೇವರ ದರ್ಶನದ ಬಳಿಕ ಪಾದ ಪೂಜೆ ನಡೆಯಿತು. ಆರಂಭದಲ್ಲಿ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳು ಸ್ವಾಮಿಗಳನ್ನು ಸ್ವಾಗತಿಸಿದರು. ಬಳಿಕ ಸ್ವಾಮಿಗಳ ಜೊತೆಯಿದ್ದ ಶ್ರೀ ಕೋದಂಡಾಶ್ರಮದ ಶ್ರೀಯುತ ಸತ್ಯನಾರಾಯಣ ಇವರು ಆಶ್ರಮ ಹಾಗೂ ಅಲ್ಲಿನ ಶ್ರೀ ಕಾಮಾಕ್ಷಿ ಶಾರದಾಂಬಾ ದೇವಾಲಯದ ಪೂರ್ವ ಇತಿಹಾಸ, ಮಹಿಮೆಯನ್ನು ತಿಳಿಸಿದರು. ಸ್ವಾಮಿಗಳು ತಮ್ಮ ಅನುಗ್ರಹ ಭಾಷಣದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜದ ಸ್ಥಾನಮಾನ ಹಾಗೂ ಅದರ ಉಳಿವಿನ ಬಗ್ಗೆ ಶ್ರಮಿಸಲು ಕರೆ ನೀಡಿದರು. ಮಂತ್ರಾಕ್ಷತೆ ನೀಡುವಾಗ, ಪ್ರತಿಯೊಬ್ಬರ ಪರಿಚಯವನ್ನು ಕೇಳಿ ತಿಳಿದು, ಆಶೀರ್ವದಿಸಿದರು. ಬಳಿಕ ಅನ್ನಸಂತರ್ಪಣೆ ನಡೆಯಿತು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಶ್ರೀಯುತ ಕರುಣ್ ರಾವ್ ಬೆಳ್ಳೆಯವರು ಸಹಕರಿಸಿದರು.

***ವರದಿ : ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್, ಪಡುಬಿದ್ರಿ***



## MOTHER INDIA

Standing high in her position,
Centrally she takes posession,
There is she with all her children,
Relaxing in this great heaven!

Happily she smiles at us,
Forgetting the past distress,
We, her children live in peace,
The blood drops feel for independence!

She has her own distinct feature,
She has the glorifying culture,
The golden words –"Happiness for all"
Is in her crown a shining pearl!

The gods and saints of all religion,
Live in her with no confusion,
Felony finds no place in her,
Cowardice all away from her!

Thus we bow before her from heart,
We now pray to her in short,
Whatever may come in future,
Please be always our tutor!
Your light of knowledge blows away,
The darkness if there any today.

***By : Sagar P.***
***10th Std, Pervaje, Sullia***

# ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಭಾದ ಮಾಸಿಕ ಸಭೆಯಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮ



ದಿನಾಂಕ 16-03-2014ನೇ ಆದಿತ್ಯವಾರ ಪಡುಬಿದ್ರಿ ಸ್ಥಾನಿಕ ಸಭಾದ ಮಾಸಿಕ ಸಭೆಯು ಎಲ್ಲೂರಿನ ಶ್ರೀ ವೈ. ವಿ. ಸುಬ್ಬರಾವ್ ಇವರ ನೂತನ ಗೃಹ 'ಶ್ರೀ ಧವಳ'ದಲ್ಲಿ ನಡೆಯಿತು. ಅಂದು ಮುಂಡ್ಕೂರಿನ ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜಿನಲ್ಲಿ ಈ ವರೆಗೆ ಉಪನ್ಯಾಸಕರಾಗಿದ್ದು, ಇದೀಗ ಪ್ರಾಂಶುಪಾಲರಾಗಿ ಭಡ್ತಿ ಹೊಂದಿರುವ ಸಂಘದ ನಿರ್ದೇಶಕರಾದ ಶ್ರೀಯುತ ವೈ. ಸುದರ್ಶನ್ ರಾವ್ ಇವರನ್ನು ಅಭಿನಂದಿಸಲಾಯಿತು. ಅಂತೆಯೇ ಸಿಂಡಿಕೇಟ್ ಬ್ಯಾಂಕಿನಲ್ಲಿ ಸುಧೀರ್ಘ ಸೇವೆಯನ್ನು ಸಲ್ಲಿಸಿ ನಿವೃತ್ತರಾಗಿರುವ ಸಂಘದ ಕೋಶಾಧಿಕಾರಿ ಶ್ರೀ ಅರವಿಂದ ರಾವ್‌ರವರನ್ನು ಗೌರವಿಸಲಾಯಿತು. ಶ್ರೀಯುತರು ತಮ್ಮ ನಿವೃತ್ತಿ ಜೀವನದ ಹೆಚ್ಚಿನ ಸಮಯವನ್ನು ಸಂಘದ ಏಳಿಗೆಗಾಗಿ ಶ್ರಮಿಸುವ ಭರವಸೆಯನ್ನಿತ್ತರು.

***ವರದಿ : ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್, ಪಡುಬಿದ್ರಿ***



## ಮನೆಯೇ ಮಂತ್ರಾಲಯ...

ಉಡುಪಿ ಸಂತೆಕಟ್ಟೆ ಶ್ರೀನಗರದಲ್ಲಿ ಶ್ರೀಮತಿ ಪದ್ಮಶ್ರೀ ಮತ್ತು ಶ್ರೀ ಕೆ. ಸತೀಶ ಹೆಬ್ಬಾರ್‌ರವರು ನೂತನವಾಗಿ ನಿರ್ಮಿಸಿರುವ ಗೃಹ **"ಭ್ರಾಮರಿ"** ಇದರ ಗೃಹಪ್ರವೇಶವು ತಾರೀಕು 21-04-2014ರಂದು ನಡೆಯಿತು.

* * * * *

ಶ್ರೀ ಅಶ್ವಿನ್ ಕೆ. ಮತ್ತು ಶ್ರೀ ಅಜಿತ್ ಕೆ. ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ನಿರ್ಮಿಸಿರುವ ಮನೆಯ (ಪ್ಲಾಟ್ ನಂ. 103, ಜಿ.ಎನ್.ಎಸ್. ರೆಸಿಡೆನ್ಸಿ) ಗೃಹಪ್ರವೇಶ ತಾ. 9-4-2014 ರಂದು ನಡೆಯಿತು.

* * * * *

ನಾರಾವಿ ಶ್ರೀ ಮೋಹನ್ ರಾವ್ ಮತ್ತು ಶ್ರೀಮತಿ ಸುಮನ್‌ರವರು ಹೊಸ್ಮಾರಿನ ಈದು ಕ್ರಾಸ್ ಬಳಿ ನೂತನವಾಗಿ ನಿರ್ಮಿಸಿರುವ **"ವೃಂದಾವನ"** ಮನೆಯ ಗೃಹಪ್ರವೇಶ ತಾರೀಕು 03-04-2014ರಂದು ನಡೆಯಿತು.

* * * * *

ಮಂಗಳೂರಿನ ಶ್ರೀ ಸಂತೋಷ ಮತ್ತು ಶ್ರೀಮತಿ ರಜನಿ ಇವರು ಕೊಟ್ಟಾರ ಚೌಕಿಯಲ್ಲಿ ನೂತನವಾಗಿ ನಿರ್ಮಿಸಿರುವ ಮನೆಯ ಗೃಹಪ್ರವೇಶೋತ್ಸವ ತಾರೀಕು 13-04-2014ರಂದು ನಡೆಯಿತು.

* * * * *

ಮಂಗಳೂರು ಆರ್ಯ ಸಮಾಜ ರಸ್ತೆಯಲ್ಲಿರುವ ಒಡಿಸ್ಸೀ ಅಪಾರ್ಟ್‌ಮೆಂಟಿನ ಒಂದನೇ ಮಹಡಿಯಲ್ಲಿರುವ 103 ಮತ್ತು 104ನೇ ಸಂಖ್ಯೆಯ ಮನೆಯ ಗೃಹಪ್ರವೇಶವು ತಾರೀಕು 08-05-2014ನೇ ಗುರುವಾರ ನಡೆಯಿತು.

## ಮನೆ ನವೀಕರಣ

ಕಾರ್ಕಳದ ಶ್ರೀ ರಾಘವೇಂದ್ರ ಮಂಟಪದ ಸಮೀಪ ಶಬರಿ ಆಶ್ರಮ ರಸ್ತೆಯ ಪಕ್ಕದಲ್ಲಿರುವ ಕೋಲ್ಪೆ ವಿಠಲರಾವ್ ದಂಪತಿಗಳು ನವೀಕರಿಸಿದ ತಮ್ಮ ಮನೆ 'ಆಶ್ರಯ'ದಲ್ಲಿ ಇದೇ ದಿನಾಂಕ 13-04-2014ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿದರು. ಕೋಲ್ಪೆ ಗೋಪಾಲಕೃಷ್ಣ ದಂಪತಿಗಳು, ಶ್ರೀ ಕೃಷ್ಣರಾಜ ಭಟ್, ಹೆಜಮಾಡಿಯವರು, ಸುಲ್ಕೇರಿ ಶ್ರೀ ಅಜಯ ಹೆಬ್ಬಾರ್ ಮತ್ತು ಹೊಸ್ಮಾರ್ ಶ್ರೀ ಹರೀಶ ರಾವ್ ಹಾಗೂ ಶ್ರೀ ಪರಪ್ಪು ರತ್ನಾಕರ ರಾವ್‌ರವರು ಕಾರ್ಯಕ್ರಮಗಳಲ್ಲಿ ಸಹಕರಿಸಿದರು.



## ಹೊಸ ಬಾಳಿನ ಹೊಸಿಲಲಿ ನಿಂತಿರುವ...

ಶ್ರೀಮತಿ ಲೀಲಾವತಿ (ಸುಮ) ಮತ್ತು ಶ್ರೀ ಕೆ. ಸುರೇಶ್ ರಾವ್ ಅವರ ಪುತ್ರ **ಚಿ। ಸುಮಿತ್** ಹಾಗೂ ಶ್ರೀಮತಿ ವನಮಾಲ ಮತ್ತು ಶ್ರೀ ಕೆ. ರಾಜಕುಮಾರ್ ರಾವ್ ಅವರ ಪುತ್ರಿ **ಚಿ। ಸೌ। ಅಪೂರ್ವ**ರವರ ವಿವಾಹವು ತಾ. 12-05-2014ನೇ ಸೋಮವಾರದಂದು ನಂದಿಕೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಶ್ರೀ ರಾಜರಾಜೇಶ್ವರೀ ಸಭಾಂಗಣದಲ್ಲಿ ನಡೆಯಿತು.

* * * * *

ಶ್ರೀ ವಸಂತ ಭಾಗವತ್ ಮತ್ತು ಶ್ರೀಮತಿ ಲಲಿತಾರವರ ಸುಪುತ್ರಿ **ಚಿ। ಸೌ। ಅರ್ಚನಾ** ಹಾಗೂ ಡಾ. ಸದಾಶಿವ ರಾವ್ ಮತ್ತು ಶ್ರೀಮತಿ ಆಶಾಲತಾರವರ ಸುಪುತ್ರ **ಚಿ। ವಿದ್ಯಾಸಾಗರ**ರವರ ವಿವಾಹವು ತಾ. 08-05-2014ನೇ ಗುರುವಾರದಂದು ಹಿರಿಯಡ್ಕ ಓಂತಿಬೆಟ್ಟಿನಲ್ಲಿರುವ 'ಶ್ರೀ ದುರ್ಗಾ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.



## ಭವತಿ ಭಿಕ್ಷಾಂದೇಹಿ ...

ಶ್ರೀಮತಿ ವೀಣಾ ಮತ್ತು ಶ್ರೀ ಚೇತನ್ ಶರ್ಮಾರವರ ಸುಪುತ್ರ **ಚಿ। ಚಿರಂತನ**ನ ಉಪನಯನ ಕಾರ್ಯಕ್ರಮವು ತಾ. 23-04-2014ನೇ ಬುಧವಾರ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ 'ಶ್ರೀ ಶಾರದ್ವತ್ ಯಜ್ಞಾಂಗಣ'ದಲ್ಲಿ ನಡೆಯಿತು.

* * * * *

ಶ್ರೀಮತಿ ಅನಿತ ಮತ್ತು ಶ್ರೀ ರವಿರಾಜ ರಾವ್‌ರವರ ಸುಪುತ್ರ **ಚಿ। ಗೌತಮ**ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾ. 02-05-2014ನೇ ಶುಕ್ರವಾರ ಉಡುಪಿ ಕುಂಜಿಬೆಟ್ಟು ಶಾರದಾ ಮಂಟಪದಲ್ಲಿ ನಡೆಯಿತು.

* * * * *

ಡಾ. ಸಂತೋಷ್ ಮತ್ತು ಡಾ. ಗೀತಾರವರ ಸುಪುತ್ರ **ಚಿ। ಸಾತ್ವಿಕ್**ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾ. 09-04-2014ನೇ ಬುಧವಾರ ಅಡೂರು ಕೆರೆಮೂಲೆ 'ಚಂದ್ರನಿವಾಸ'ದಲ್ಲಿ ನಡೆಯಿತು.

* * * * *

ಶ್ರೀಮತಿ ದಿವ್ಯ ಮತ್ತು ಶ್ರೀ ಬಾಬುರಾಜರವರ ಸುಪುತ್ರ **ಚಿ। ಭವಿತ್**ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾ. 09-04-2014ನೇ ಬುಧವಾರ ಪಡುಬಿದ್ರಿಯಲ್ಲಿರುವ 'ರಜತಾದ್ರಿ' ಮನೆಯಲ್ಲಿ ನಡೆಯಿತು.

* * * * *

ಡಾ. ಸತೀಶ್ ರಾವ್ ಮತ್ತು ಶ್ರೀಮತಿ ದಿವ್ಯಾರವರ ಪುತ್ರ **ಚಿ। ಸುಧೀಶ್**ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾ. 02-05-2014ನೇ ಶುಕ್ರವಾರ ಪುತ್ತೂರು ಶ್ರೀ ಮಹಾಲಿಂಗೇಶ್ವರ ಸಭಾಭವನದಲ್ಲಿ ನಡೆಯಿತು.


The RIGHT Place for the Customer

**RAJESH POWER PRESS**


PRINTERS & PUBLISHERS

DARBE - 574 202, PUTTUR, D. K., KARNATAKA

Phone : (08251) 231696, 231697 & 322386

E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**

ಹಾಗೂ

**ಶ್ರೀಮತಿ ಆರತಿ ಶರ್ಮ**

**ಪ್ರಮೋದ್ ಟವರ್ಸ್, ಮಂಗಳೂರು**

*Manish Rao U.*

Tel : (O) 2223301

Mobile : 9448726499 / 8884284939

**NAVA COMPUTER**



*Dealers in : Computers Hardware and Peripherals*
*Computer Sales & Services*

*Alvares Centre, N.H. 17, Nanthoor, Mangalore - 575 005*

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**

ಮತ್ತು

**ಶ್ರೀಮತಿ ಅರುಣಾ ಸೋಮಶೇಖರನ್**

**ಚಿಲಿಂಬಿ, ಮಂಗಳೂರು**



**PRAMOD AUTOMOBILES**

30 Years of Service

KARANGALPADY
MANGALORE- 575 003

Ph. : 2493633 (O)
2212723 (R)
M. : 9448260225

Wholesale & Retail Dealers in
2 & 3 WHEELERS SPARES & ACCESSORIES

Prop. : Ln. K. HARSHA KUMAR

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**

ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**

# "ಅಗ್ರಜನ್ಮ" – ಬ್ರಾಹ್ಮಣ

* **ಹರಿದಾಸ ಮ. ನಾ. ಹೆಬ್ಬಾರ್,** ಎಂ.ಎ., ಬಿ.ಎಡ್.
ನಿವೃತ್ತ ಉಪನ್ಯಾಸಕರು, ಉಡುಪಿ
ದೂರವಾಣಿ : 9449180564

**"ಜನ್ಮನಾ ಜಾಯತೇ ಜಂತುಃ ಸಂಸ್ಕಾರಾತ್‌ದ್ವಿಜಉಚ್ಯತೇ
ವೇದಾಭ್ಯಾಸೇನ ವಿಪ್ರಸ್ವಂ ಬ್ರಹ್ಮಜ್ಞಾನೇನ ಬ್ರಾಹ್ಮಣ"
"ದುರ್ಲಭಂ ಮಾನುಷ ಜನ್ಮಂ"**

ಎನ್ನಲಾಗುತ್ತದೆ. ಹಿಂದಿನ ಹಲವಾರು ಜನ್ಮಗಳಲ್ಲಿ ಪುಣ್ಯಕಾರ್ಯಗಳನ್ನೆಸಗಿ ಮಾನವ ಜನ್ಮವನ್ನು ಪಡೆಯುತ್ತಾನೆ ಎಂಬ ಮಾತಿದೆ. ದೊರಕಿದಂತಹ ಈ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಂಡು ಬಾಳಬೇಕಾದುದು ಮಾನವನ ಕರ್ತವ್ಯ. ಅದರಲ್ಲೂ, ಮಾನವ ಜನ್ಮದಲ್ಲಿ 'ಬ್ರಾಹ್ಮಣ ಜನ್ಮ' ಯಾ 'ಬ್ರಾಹ್ಮಣನಾಗಿ ಹುಟ್ಟುವುದು' ಅತ್ಯಂತ ಪುಣ್ಯಕರ ವಾದುದು. ಇಂದಿನ ಸಮಾಜದಲ್ಲಿ ಕೆಲವರು ತಮ್ಮ ಬ್ರಾಹ್ಮಣ ಜಾತಿಯ ಕುರಿತು ಕೀಳರಿಮೆ ಉಳ್ಳವರೂ ಇರುವರು. ತಾನು ಬ್ರಾಹ್ಮಣನಾಗಿ ಏಕೆ ಹುಟ್ಟಿದೆನೋ ಎಂದು ಚಿಂತಿಸು ವವರೂ, ತಮ್ಮ ಹುಟ್ಟಿನ ಕುರಿತಾದಂತಹ ದುರಾಗ್ರಹ ಉಳ್ಳವರೂ ಇರುವರೆಂಬುದು ಬೇಸರದ ಸಂಗತಿ. ಹುಟ್ಟಿದಾಗ ಮನುಷ್ಯನು ಕೇವಲ ಒಂದು ಜಂತುವಿಗೆ ಸಮನಾಗಿರುವನು. ಸಂಸ್ಕಾರದಿಂದ ಆತನು 'ದ್ವಿಜ'ನೆನಿಸಿ, ಉಚ್ಚಸ್ಥಾನವನ್ನು ಪಡೆಯುವನು. 'ಬ್ರಹ್ಮೋಪದೇಶ'ವನ್ನು ಕೊಟ್ಟಾಗ ಆತನಿಗೆ ಮತ್ತೊಂದು ಕಣ್ಣನ್ನೇ ಕೊಟ್ಟಂತಾಗುತ್ತದೆ. 'ವೇದ' ಅಥವಾ 'ಬ್ರಹ್ಮ'ನ ಸಮೀಪಕ್ಕೆ ಆತನನ್ನು ಒಯ್ಯುವ ಸಂಸ್ಕಾರವೇ 'ಉಪನಯನ'ವೆಂದಾಗಿರುವುದು. ಇದರ ನಂತರ ಅವನು ಮರುಹುಟ್ಟನ್ನು (ಪುನರ್ಜನ್ಮ) ಪಡೆದು 'ದ್ವಿಜ'ನೆನ್ನಿಸುವನು. ವೇದಾಭ್ಯಾಸವನ್ನು ಮಾಡುವುದರಿಂದ ವಿಪ್ರತ್ವವು ಅವನಿಗೆ ಪ್ರಾಪ್ತವಾಗುತ್ತದೆ. ಹಾಗೆಯೇ 'ಬ್ರಹ್ಮಜ್ಞಾನ' ಅಂದರೆ ವೇದವನ್ನು ತಿಳಿದವನು ಬ್ರಾಹ್ಮಣನೆನಿಸುವನು. ಆದ್ದರಿಂದ **'ಬ್ರಹ್ಮವೇದಃ ತದಧೀತೇ ಇತಿ ಬ್ರಾಹ್ಮಣಃ'** ಎಂಬುದು 'ಬ್ರಾಹ್ಮಣ' ಪದದ ವ್ಯುತ್ಪತ್ತಿಯು. ವೇದವು ಅಥವಾ ಬ್ರಹ್ಮವು ಅಭಿವ್ಯಕ್ತವಾಗುವ ನೆಲೆಯಾದ್ದರಿಂದ ಬ್ರಾಹ್ಮಣನಿಗೆ 'ವೇದಾವಾಸ' ಎಂಬ ನಾಮಾಂತರವೂ ಉಂಟು. ಸಮಸ್ತ ದೇವತೆಗಳೂ ಅಭಿವ್ಯಕ್ತವಾಗಲು ಅನುಕೂಲವಾದ ದೇಹವಾದ್ದರಿಂದ 'ಭೂಸುರ' ಅಥವಾ 'ಭೂದೇವ' ಎಂಬ ಅನ್ವರ್ಥನಾಮಗಳೂ ಬ್ರಾಹ್ಮಣನಿಗೆ ಬಂದಿರುವುವು. ವೇದಾಧ್ಯಯನವು ಬ್ರಾಹ್ಮಣನಿಗೆ ಅತ್ಯಂತ ಪ್ರಮುಖವಾದುದು. ಮರದಿಂದ ಆನೆಯ ಗೊಂಬೆ ಯೊಂದನ್ನು ಮಾಡಿ ನಿಲ್ಲಿಸಿದರೆ, ಚರ್ಮದಿಂದ ಹರಿಣ ಯಾ ಇತರ ಯಾವುದೇ ಮೃಗವೊಂದನ್ನು ಮಾಡಿ ನಿಲ್ಲಿಸಿದರೆ ಅವುಗಳು ಹೇಗೆ ನಿರರ್ಥಕವೋ ಹಾಗೆಯೇ ವೇದಾಧ್ಯಯನವಿಲ್ಲದ ಬ್ರಾಹ್ಮಣನ ಜನ್ಮವೂ ನಿರರ್ಥಕ ವಾದುದು. ವೇದಾಧ್ಯಯನವೆಂದರೆ ಕೇವಲ ಸಂಸ್ಕೃತದ ಶ್ಲೋಕಗಳ ಪಠನ ಯಾ ಕಂಠಪಾಠ ಮಾತ್ರವಲ್ಲ ಅವುಗಳ ಅನುಸಂಧಾನವೂ ಆಯಾ ದೇವತೆಗಳನ್ನು ದರ್ಶನ ಮಾಡಿಸುವ ಸಾಧನವಾಗಿದೆ.

ಇಂತಹ ಬ್ರಾಹ್ಮಣನಿಗೆ ಕೆಲವೊಂದು ಆಚಾರ–ವಿಚಾರಗಳು ಹೇಳಲ್ಪಟ್ಟಿವೆ. ಆಹಾರ, ವಿಹಾರ, ಸ್ನೇಹ–ಸಂಬಂಧ, ವಿದ್ಯಾ, ವಿನಯ, ದೃಢಚಿತ್ತ ಮೊದಲಾದುವು ಬ್ರಾಹ್ಮಣನಿಗೆ ವಿಧಿಸಲ್ಪಟ್ಟ ಆಚಾರ–ವಿಚಾರಗಳು ಯಾ ನೀತಿಸಂಹಿತೆಗಳು. ಇವುಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರುವುದು ಬ್ರಾಹ್ಮಣನ ಕರ್ತವ್ಯ. ವೇದಾಧ್ಯಯನದ ಬಗ್ಗೆ ಈ ಮೊದಲೇ ಹೇಳಿದೆ. ಇವುಗಳೆಲ್ಲದರೊಂದಿಗೆ ಪರಪೀಡನಾದಿ ಪಿಡುಗುಗಳಿಂದ ದೂರವಿದ್ದು ಶೌಚಾದಿ ನಿಯಮಗಳನ್ನು ಪಾಲಿಸುತ್ತಿದ್ದು, ಪುರಾಣವಾಚನ, ಸತ್ ವ್ಯವಹಾರ, ಸತ್ಕರ್ಮಗಳನ್ನು ನಡೆಸುತ್ತಿದ್ದು, ಸಮಾಜದ ಹಾಗೂ ಆತ್ಮದ ಏಳಿಗೆಗಾಗಿ ದುಡಿಯುತ್ತಿರುವುದು ಬ್ರಾಹ್ಮಣನ ದಿನಚರಿಯಾಗಿರಬೇಕು. ಲೌಕಿಕ ವ್ಯವಹಾರ–ಜಂಜಾಟಗಳಿಂದ ತುಸು ಕಾಲವಾದರೂ ದೂರವಿದ್ದು ಆಧ್ಯಾತ್ಮದ ಚಿಂತನೆಯನ್ನು ನಡೆಸಬೇಕಾದುದು ಬ್ರಾಹ್ಮಣನ ಕರ್ತವ್ಯ. ಪ್ರಾಚೀನ ಭಾರತದಲ್ಲಿ ಚತುರ್ವರ್ಣ ಗಳು ಬಳಕೆಯಲ್ಲಿದ್ದುವು. ಇವುಗಳು ಅವರವರ ವೃತ್ತಿಗಳ ಮೇಲಿಂದ ಬಂದುವುಗಳಲ್ಲದೆ ಹುಟ್ಟಿನಿಂದಲ್ಲವೆಂದು ಹೇಳ ಲಾಗುತ್ತದೆ. ಯಜ್ಞ–ಯಾಗಾದಿಗಳು, ದೇವತಾರ್ಚನೆಗಳ ಮೂಲಕ ಲೋಕಕಲ್ಯಾಣವನ್ನು ಸಾಧಿಸುವವರು ಬ್ರಾಹ್ಮಣ ರೆಂದೂ, ಪ್ರಜೆಗಳನ್ನು ತಮ್ಮ ಭುಜಬಲದಿಂದ ಆಳು ತ್ತಿದ್ದವರು ಕ್ಷತ್ರಿಯರೆಂದೂ, ವ್ಯವಸಾಯ, ವ್ಯಾಪಾರ ಇತ್ಯಾದಿ ಗಳಿಂದ ತಮ್ಮ ಜೀವನ ಸಾಗಿಸುವುದರೊಂದಿಗೆ ಸಮಾಜಕ್ಕೆ ಒಳಿತನ್ನುಂಟುಮಾಡುತ್ತಿದ್ದವರು ವೈಶ್ಯರೆಂದೂ, ಈ ಮೂರೂ ವರ್ಗಗಳ ಊಳಿಗ ವೃತ್ತಿಯನ್ನು ಮಾಡು ತ್ತಿದ್ದವರು ಶೂದ್ರರೆಂದೂ ಗುರುತಿಸಲ್ಪಟ್ಟರು. ಇದನ್ನೇ ಶಾಸ್ತ್ರಕಾರರು ಬ್ರಾಹ್ಮಣರು ಪರಮಾತ್ಮನ (ವಿಷ್ಣುವಿನ) ಮುಖದಲ್ಲಿ ಹುಟ್ಟಿದರೆಂದೂ, ಕ್ಷತ್ರಿಯರು ಬಾಹುಗಳಿಂದ ಜನಿಸಿದರೆಂದೂ, ಕಟಿ(ಸೊಂಟ) ಪ್ರದೇಶದಿಂದ ವೈಶ್ಯರೂ, ಪಾದದಿಂದ ಶೂದ್ರರೂ ಜನಿಸಿದರು ಎಂದು ವಿವರಿಸಿದರು. ಇವುಗಳೆಲ್ಲ ಕೇವಲ ಕಲ್ಪನೆಗಳಾದರೂ ಸೂಕ್ಷ್ಮವಾಗಿ ಗಮನಿಸಿದರೆ ಈ ವಿವರಣೆಯು ವಿಶಾಲವಾದ ಅಂತರಾರ್ಥ ವನ್ನು ಹೊಂದಿರುವುದು ಗೋಚರವಾಗುತ್ತದೆ. ತನ್ನ ಜೀವಮಾನವಿಡೀ ಮಂತ್ರೋಚ್ಚಾರಣೆ, ವೇದಾಧ್ಯಯನ, ಶುದ್ಧ ಮಾತುಕತೆ, ಪರೋಪದೇಶ, ಅಧ್ಯಾಪನ ಇತ್ಯಾದಿಗಳಲ್ಲಿ ನಿರತನಾಗಿರಬೇಕಾದ ಬ್ರಾಹ್ಮಣನಿಗೆ ಜಿಹ್ವೆಯೇ ಶ್ರೇಷ್ಠ ವಾದುದು ಮತ್ತು ಪ್ರಮುಖ ಅಂಗವು. ಆದ್ದರಿಂದಲೇ ಮುಖದಿಂದ ಬ್ರಾಹ್ಮಣ ಜನಿಸಿದ ಎಂಬುದು ಸಮರ್ಪಕ ವಾದುದು. ತನ್ನ ಬಾಹುಬಲದಿಂದ ದುಷ್ಟಶಿಕ್ಷಣ, ಶಿಷ್ಟರಕ್ಷಣ ಕಾರ್ಯಗಳಲ್ಲಿ ನಿರತನಾಗಿರಬೇಕಾದ ಕ್ಷತ್ರಿಯನಿಗೆ ಬಾಹುಗಳೇ ಪ್ರಮುಖಾಂಗಗಳು. ಪರಮಾತ್ಮನ ಅಂತಹ ಬಾಹುಗಳಿಂದ ಕ್ಷತ್ರಿಯ ಉದಿಸಿದ ಎಂಬುದು ಅನ್ವರ್ಥ ವಾಗಿದೆ. ಕೃಷಿ, ವ್ಯವಸಾಯಾದಿಗಳಿಂದ ಜೀವನವನ್ನು ಸಾಗಿಸುತ್ತಿರುವ ವೈಶ್ಯನಿಗೆ ದೈಹಿಕ ಸಾಮರ್ಥ್ಯವು ಮುಖ್ಯ ವಾದುದು. ಆದ್ದರಿಂದ ಆತನು ಕಟಿ(ಸೊಂಟ)ಯಿಂದ ಉದ್ಭವಿಸಿದನೆಂಬುವುದರಲ್ಲಿ ಅರ್ಥವೇ ತುಂಬಿದೆ. ನಾಲ್ಕು ವರ್ಗಗಳಲ್ಲಿ ಕೊನೆಯವನಾಗಿದ್ದು, ಇತರರ ಕಾಲಬುಡ ದಲ್ಲಿಯೇ ಉಪಸ್ಥಿತನಿರಬೇಕಾದವನಾದ್ದರಿಂದ ಶೂದ್ರನು ಪಾದದಿಂದ ಉದಿಸಿದನೆಂಬುದು ಸಮರ್ಪಕವೇ ಆಗಿದೆ ಎನ್ನಬಹುದು.

ಕೃತ, ತ್ರೇತ, ದ್ವಾಪರ ಮತ್ತು ಕಲಿಯೆಂಬ ನಾಲ್ಕು ಯುಗಗಳನ್ನು ಹೆಸರಿಸಲಾಗುತ್ತದೆ. ಇವುಗಳಲ್ಲಿ ಮೊದಲನೆಯದಾದ ಕೃತಯುಗದಲ್ಲಿ ಯಜ್ಞ–ಯಾಗಾದಿ ಗಳನ್ನು ವಿಶೇಷವಾಗಿ ನಡೆಸುತ್ತಿದ್ದ ಬ್ರಾಹ್ಮಣರದ್ದೇ ಪ್ರಾಬಲ್ಯ ವಿದ್ದ ಕಾಲವಿತ್ತು. ಇತರ ವರ್ಣಗಳವರು ಕೃತಯುಗದಲ್ಲಿ ಇದ್ದಿಲ್ಲವೆಂಬ ಒಂದು ವಾದವೂ ಇದೆ.


**"ಜೀವಿತಂ ಯಸ್ಯ ಧರ್ಮಾರ್ಥಂ ಧರ್ಮೋ ರಕ್ಷಾರ್ಥ ವೇವಚ, ಅಹೋ ರಾತ್ರಂಚ ಪುಣ್ಯಾರ್ಥಂ ತಂ ದೇವಾ ಬ್ರಾಹ್ಮಣಂ ವಿದುಃ"**

'ಯಾರ ಜೀವಿತವು ಧರ್ಮಕ್ಕಾಗಿದೆಯೋ, ಧರ್ಮವು ಅನಂತಾನುಭವಕ್ಕಾಗಿ ಇದೆಯೋ, ಅಹೋರಾತ್ರಿಗಳು ಪುಣ್ಯ ಸಂಪಾದನೆಗಾಗಿ ಇವೆಯೋ ಅವನನ್ನು ದೇವತೆಗಳು ಬ್ರಾಹ್ಮಣನೆನ್ನುತ್ತಾರೆ' ಎಂದಿದೆ. ಈ ರೀತಿಯಲ್ಲಿ ಜ್ಞಾನಾನಂದ ಗಳಿಗಾಗಿ ಅಹೋರಾತ್ರಿಗಳನ್ನು ಮುಡುಪಾಗಿಟ್ಟು, ಜ್ಞಾನಾನಂದನಿಧಿಯಾಗಿ, ವಿದ್ಯಾನಿಧಿಯಾಗಿ ಬದುಕುವವ ನಾದ್ದರಿಂದ ಅವನಿಗೊಂದು ಹಿರಿತನ ಬಂದಿರುವುದು, ಅದು ಜ್ಞಾನ ಮತ್ತು ಆನಂದಗಳಿಂದ ಬಂದ ಹಿರಿತನ. ಆಗ **"ವರ್ಣಾನಾಂ ಬ್ರಾಹ್ಮಣೋ ಗುರುಃ"**. 'ವರ್ಣನೆಗಳಿಗೆಲ್ಲ ಬ್ರಾಹ್ಮಣನು ಗುರು' ಎಂಬ ಮಾತು ಚರಿತಾರ್ಥವಾಗುತ್ತದೆ. ಹಾಗೆಯೇ ಮುಂದುವರಿದು ಬ್ರಾಹ್ಮಣನ ಲಕ್ಷಣಗಳನ್ನು ಕುರಿತು ಹೇಳುತ್ತಾ


**"ಕ್ಷಮಾ ದಯಾ ಚ ವಿಜ್ಞಾನಂ ಸತ್ಯಂ ಚೈವ ದಮಃ ಶಮಃ,
ಅಧ್ಯಾತ್ಮಂ ಸತ್ಯತಾ ಜ್ಞಾನಂ ಏತದ್ ಬ್ರಾಹ್ಮಣ ಲಕ್ಷಣಮ್",**
'ಕ್ಷಮೆ, ದಯೆ, ವಿಜ್ಞಾನ (ವಿಶೇಷವಾದ ಜ್ಞಾನ) ಸತ್ಯ, ದಮ, ಶಮ, ಅಧ್ಯಾತ್ಮ, ನಿತ್ಯಾನಿತ್ಯ ವಿವೇಕ – ಇವು ಬ್ರಾಹ್ಮಣ ಲಕ್ಷಣ' ಎಂಬ ಮಾತು ಮನನೀಯವಾಗಿದೆ. ಇಂತಹ ಲಕ್ಷಣಗಳುಳ್ಳವನೇ ನಿಜವಾದ ಬ್ರಾಹ್ಮಣ! ಬ್ರಾಹ್ಮಣನ ಬದುಕು ಅವನ ಜನ್ಮಸಹಜವಾದ ಲಕ್ಷದತ್ತ ಸಾಗದೆ ಕೇವಲ ಉದರಂಭರಣಕ್ಕಾಗಿ ಮಾತ್ರ ಸಾಗುತ್ತಿರುವುದು ದುರಂತದ ಸಂಗತಿ; ಹಾಗಾಗಬಾರದು. ಲೌಕಿಕ ವ್ಯವಹಾರ ಗಳಿಂದ ಬ್ರಾಹ್ಮಣರು ಕೊಂಚವಾದರೂ ವಿಮುಖರಾಗಿ ಆತ್ಮ ಸಾಧನೆಯತ್ತ ಗಮನಹರಿಸಬೇಕು. ಈ ದಿಸೆಯಲ್ಲಿ ಆದಿಕಾಲದ ಬ್ರಾಹ್ಮಣರು ಋಜುಮಾರ್ಗದಲ್ಲಿ ಸಾಗುತ್ತಿದ್ದರು. ಸೃಷ್ಟಿಯ ವಿಕಾಸದ ಮೊದಲ ಹಂತದಲ್ಲಿ ರೂಪುಗೊಂಡಿದ್ದರಿಂದ 'ಅಗ್ರಜನ್ಮ' ಎಂಬುದು 'ಬ್ರಾಹ್ಮಣ'ನ ಮತ್ತೊಂದು ಹೆಸರಾಗಿದೆ.

**ಭಾಮಿನಿ ಷಟ್ಪದಿ**

ಭೂಸುರನು ತಾನಾಗಿ ಜನಿಸುತ ।
ಆಸೆಗಳ, ಷಡ್ವೈರಿಗಳತಾ ।
ದಾಸನಾಗದೆ ಧರ್ಮಕಾರ್ಯವ ಸತತ ನಡೆಸುತಲಿ ॥
ಭಾಸುರದ ವೇದಾಧ್ಯಯನ, ಕ್ಷಮೆ ।
ತ್ರಾಸವಿಲ್ಲದ ಸತ್ಯ, ಶಮ, ದಮ ।
ಆ ಸುರರ ಪ್ರೀತ್ಯರ್ಥ ಪೂಜಾದಿಗಳ ಸಲ್ಲಿಪುದು ॥

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ಧೃತಿ ಮತ್ತು ಧ್ರುವ್**


**ಹೆಬ್ಬಾರ್ ಎಂಟರ್‌ಪ್ರೈಸಸ್**
**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101**
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 9448437893

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**

Prop. : *Kishore Kumar Kedige*
Ph. : 2231524
M. : 9880726325

**KYADIGE AUTOMOBILES**
**Opp. to D. P. Stores Main Road, B. C. Road, Bantwal Tq.**
***Dealers in : 2 & 3 WHEELERS SPARES***


# ಕುಮಾರಿ ಪ್ರೇರಣಾಳ ಭರತನಾಟ್ಯ ರಂಗಪ್ರವೇಶ







'ಕಲೆ' ಎಂಬುದು ಆತ್ಮ - ಪರಮಾತ್ಮ ಸಂಬಂಧವಾದ ಆಧ್ಯಾತ್ಮಿಕ ಆನಂದವನ್ನು ನೀಡುವಂತಹದು. ಇಂತಹ ಪವಿತ್ರವಾದ ಸಾಂಪ್ರದಾಯಿಕ ಕಲೆಯನ್ನು ಎಳವೆಯಲ್ಲಿಯೇ ಅಧ್ಯಯನ ಮಾಡಿದ ಕುಮಾರಿ ಪ್ರೇರಣಾಳ ಭರತನಾಟ್ಯ ರಂಗಪ್ರವೇಶವನ್ನು ತಾರೀಕು 26-4-2014ರಂದು ಸಂಜೆ ಮಂಗಳೂರಿನ ಪುರಭವನದಲ್ಲಿ ಅದ್ದೂರಿಯಾಗಿ ಆಯೋಜಿಸಲಾಯಿತು. ಕು| ಪ್ರೇರಣಾ ಮಂಗಳೂರಿನ ಪ್ರತಿಷ್ಠಿತ ಉದ್ಯಮಿ, ವಿಶ್ರಾಮ್ ಮೋಟಾರ್ಸ್‌ನ ವ್ಯಾಲಕ ಶ್ರೀಯುತ ಅನಿಲ್ ರಾವ್ ಬಿ. ಎಸ್. ಮತ್ತು ಸೈಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಶ್ರೀಮತಿ ಭಾರತಿ ಅನಿಲ್ ರಾವ್‌ರವರ ಸುಪುತ್ರಿ. ಪೋಷಕರಿಬ್ಬರೂ ಇಂಜಿನಿಯರ್‌ಗಳಾದರೂ ಕಲೆಯಲ್ಲಿ ಮತ್ತು ಸಮಾಜಸೇವೆಯಲ್ಲಿ ಅತ್ಯಂತ ಆಸಕ್ತಿವುಳ್ಳವರು. ಎಳವೆಯಲ್ಲಿಯೇ ಮಗಳ ಪ್ರತಿಭೆ ಹಾಗೂ ನೃತ್ಯದಲ್ಲಿ ಆಸಕ್ತಿಯನ್ನು ಗಮನಿಸಿ ಕದ್ರಿ ನೃತ್ಯವಿದ್ಯಾನಿಲಯದ ನೃತ್ಯ ಶಿಕ್ಷಕರಾಗಿರುವ ಗುರುಕುಲಭೂಷಣ ವಿದ್ವಾನ್ ಯು. ಕೆ. ಪ್ರವೀಣ್ ಹಾಗೂ ಶ್ರೀಮತಿ ಉಷಾ ಪ್ರವೀಣ್ ಇವರಲ್ಲಿ ನೃತ್ಯ ಶಿಕ್ಷಣವನ್ನು ಕೊಡಿಸಿದರು. ಸೂಕ್ಷ್ಮಮತಿಯಾದ ಪ್ರೇರಣಾ ಕೆನರಾ ಡೊಂಗರಕೇರಿ ಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ, ತರಗತಿಯಲ್ಲೂ ಉನ್ನತ ಶ್ರೇಣಿಯನ್ನು ಹೊಂದಿರುವ ಈಕೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಅನೇಕ ಬಹುಮಾನ ವಿಜೇತೆ. ಬಾಸ್ಕೆಟ್‌ಬಾಲ್ ಆಟಗಾರ್ತಿ; ನೃತ್ಯ ಮತ್ತು ಸಂಗೀತದಲ್ಲಿ ಜೂನಿಯರ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ತನ್ನ ಎಂಟನೆಯ ವಯಸ್ಸಿನಲ್ಲಿ ನೃತ್ಯಾಭ್ಯಾಸ ಆರಂಭ ಹಾಗೂ ಕರ್ನಾಟಕ ಸಂಗೀತ ಅಭ್ಯಾಸವನ್ನು ಮಾಡಿರುವ ಈಕೆ ನೂರಕ್ಕೂ ಅಧಿಕ ನೃತ್ಯ ಪ್ರದರ್ಶನವನ್ನು ನೀಡಿದ್ದಾಳೆ. ಇದೀಗ ತನ್ನ ಅಜ್ಜಿ ದಿವಂಗತ ಶ್ರೀಮತಿ ರತ್ನಾವತಿಯಮ್ಮನವರ ಆಶಯದಂತೆ 'ರಂಗಪ್ರವೇಶ' ನಡೆಸಿದ್ದಾಳೆ.

ಮೊದಲಿಗೆ ಅರೆಹೊಳೆ ಸದಾಶಿವ ರಾವ್‌ರವರು ಬಂದವರನ್ನೆಲ್ಲಾ ಆತ್ಮೀಯವಾಗಿ ಸ್ವಾಗತಿಸಿದರು. ಕುಮಾರಿ ಪ್ರೇರಣಾ, ಗುರುಗಳಾದಂತಹ ವಿದ್ವಾನ್ ಯು. ಕೆ. ಪ್ರವೀಣ್, ಉಷಾ ಪ್ರವೀಣ್, ಮಾತಾಪಿತರಾದ ಶ್ರೀ ಬಿ. ಎಸ್. ಅನಿಲ್ ರಾವ್ ಮತ್ತು ಶ್ರೀಮತಿ ಭಾರತಿ ಅನಿಲ್ ರಾವ್ ಮತ್ತು ಕುಟುಂಬದ ಹಿರಿಯರೊಂದಿಗೆ ನಟರಾಜನಿಗೆ ಶ್ಲೋಕದೊಂದಿಗೆ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ, ಹಿರಿಯರಿಗೂ ದೇವರಿಗೂ ನಮಸ್ಕರಿಸಿದ ಪ್ರೇರಣಾ ಗುರುಗಳಿಂದ ಗೆಜ್ಜೆಯನ್ನು ಸ್ವೀಕಾರ ಮಾಡಿ ಪ್ರಾರ್ಥನೆಯ ನಂತರ ಆತ್ಮವಿಶ್ವಾಸದಿಂದ ವೇದಿಕೆಯನ್ನು ಪ್ರವೇಶಿಸಿದಳು. ಪುಷ್ಪಾಂಜಲಿ, ಅಲರಿಪು, ಜತಿಸ್ವರ, ಪದವರ್ಣ, ದೇವರನಾಮಗಳ ನೃತ್ಯವನ್ನು ಭಾವಪೂರ್ಣವಾಗಿ ಪ್ರದರ್ಶಿಸಿದಳು. ತದನಂತರ ಡಾ. ಶ್ರೀಪತಿ ರಾವ್ ಅಧ್ಯಕ್ಷತೆಯಲ್ಲಿ ಸಭಾಕಾರ್ಯಕ್ರಮವು ಜರುಗಿತು. ಮುಖ್ಯ ಅತಿಥಿಗಳಾದ ಶ್ರೀಯುತ ಮನೋಹರ್ ಪ್ರಸಾದ್, ಡಾ. ಸಿ. ಕೆ. ಬಲ್ಲಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅನಿಲ್ ರಾವ್‌ರವರು ಪ್ರಾಸ್ತಾವಿಕ ಮತ್ತು ಸ್ವಾಗತ ಭಾಷಣವನ್ನು ಮಾಡಿದ ನಂತರ ಕು| ಪ್ರೇರಣಾಳಿಂದ ಗುರುವಂದನಾ ಕಾರ್ಯಕ್ರಮವು ನೆರವೇರಿತು. ವಿದ್ವಾನ್ ಯು. ಕೆ. ಪ್ರವೀಣ್‌ರವರು ತಮ್ಮ ಶಿಷ್ಯೆಯ ಆಸಕ್ತಿ ಮತ್ತು ಶ್ರದ್ಧೆಗಳನ್ನು ತಮ್ಮ ಹಿತನುಡಿಗಳಲ್ಲಿ ವ್ಯಕ್ತಪಡಿಸಿ ಒಳ್ಳೆಯ ನೃತ್ಯಗಾತಿಯಾಗಲೆಂದು ಆಶೀರ್ವದಿಸಿದರು. ನೆರೆದ ಗಣ್ಯರೆಲ್ಲರೂ ಕುಮಾರಿ ಪ್ರೇರಣಾಳನ್ನು ಆಶೀರ್ವದಿಸಿ ಪ್ರೋತ್ಸಾಹದ ನುಡಿಗಳನ್ನು ನುಡಿದರು. ಡಾ. ಶ್ರೀಪತಿ ರಾವ್‌ರವರು ಪ್ರೇರಣಾಳ ಈ ಏಳಿಗೆಗೆ ಮಾತಾಪಿತರೇ ಕಾರಣ ಎಂಬ ಮೆಚ್ಚುಗೆಯನ್ನೂ ಅಭಿನಂದನೆಯನ್ನೂ ವ್ಯಕ್ತಪಡಿಸಿದರು. ಪ್ರೇರಣಾ ತನ್ನ ಈ ಸಾಧನೆಗೆ ಕಾರಣಕರ್ತರಾದಂತಹ ತನ್ನ ಗುರುಗಳಿಗೂ, ಹೆತ್ತವರಿಗೂ ಮನತುಂಬಿ ಕೃತಜ್ಞತೆಯನ್ನು ತಿಳಿಸಿದಳು. ಕೊನೆಯದಾಗಿ ಧನ್ಯವಾದ ಸಮರ್ಪಣೆಯನ್ನು ಶ್ರೀಮತಿ ಭಾರತಿ ಅನಿಲ್ ರಾವ್ ನಡೆಸಿಕೊಟ್ಟರು. ಸಭಾ ಕಾರ್ಯಕ್ರಮದ ನಂತರ ಪುಟ್ಟ ಶಿಲಾಬಾಲಿಕೆಯಂತೆ ಕಂಗೊಳಿಸುತ್ತಾ ಕುಮಾರಿ ಪ್ರೇರಣಾ 'ಹೇ ಶಿವಶಂಕರ' 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ' ಮತ್ತು ಜಾನಪದ ನೃತ್ಯವನ್ನು ಭಾವಪೂರ್ಣವಾಗಿ ಪ್ರದರ್ಶಿಸಿದಳು.

ಆಧುನಿಕ ಕಾಲದ ಸ್ಪರ್ಧಾಯುಗದಲ್ಲಿ ಭಾರತೀಯ ಸಾಂಪ್ರದಾಯಿಕ ನೃತ್ಯವನ್ನು ಪೋಷಿಸಿ ಮಕ್ಕಳಲ್ಲಿ ಸಾಹಿತ್ಯ, ನಾಟ್ಯ, ಸಂಗೀತದ ಅಭಿರುಚಿಯನ್ನು ಬೆಳೆಸುತ್ತಿರುವ ಶ್ರೀ ಅನಿಲ್ ರಾವ್ ದಂಪತಿಗಳಿಗೆ ಅಭಿನಂದನೆಗಳು. ಕುಮಾರಿ ಪ್ರೇರಣಾಳ ಭವಿಷ್ಯ ಉಜ್ವಲವಾಗಲಿ, ಇತರರಿಗೆ 'ಪ್ರೇರಣಾ' ಪ್ರೇರಣೆಯಾಗಲಿ ಎಂದು 'ಶ್ರೀ ಜ್ಞಾನಶಕ್ತಿ' ಬಳಗ ಆಶಿಸುತ್ತದೆ.

**ವರದಿ : ಶ್ರೀಮತಿ ಅರುಣಾ ಸೋಮಶೇಖರ್**
**ಮಂಗಳೂರು**

**ಚಿತ್ರ : ರಘುವೀರ್ ಪೆರ್ಡೂರ್**

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex**
**Church Building, Main Road**
**BAJPE, MANGALORE**



**PRAVEEN KUMAR ADYAPADY**
**ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes :** Civil, Criminal, Motor Vehicles,
A.C., D.C. Cases, Land Conversion, Registration etc.



**ಹೋಮಿಯೋಪತಿ ಹಾಗೂ**
**ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.**
**ಡಾ. ಸುಶೀಲ ರಾವ್,** ಬಿ.ಎಚ್.ಎಮ್.ಎಸ್.
**ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್**
**ಸ್ಪರ್ಶ ಮೆಡಿಕಲ್ ಸೆಂಟರ್**
**ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2**
ದೂರವಾಣಿ : 0824-4276666 ಮೊಬೈಲ್ : 9844063805



**SHARMA ENTERPRISES**
**KANKANADY, MANGALORE - 575 002**

**Mob. : 9844187083**

**Prop. :**
***Chethan Sharma***

## ವಿದಾಯ ಸಮಾರಂಭ



**ಮೂಡುಶೆಡ್ಡೆ :** ಮೂಡುಬಿದ್ರೆ ವಿಧಾನಸಭಾ ಕ್ಷೇತ್ರದ ಶಾಸಕರ ಮಾದರಿ ಶಾಲೆಯಲ್ಲಿ ಪದವೀಧರ ಮುಖ್ಯ ಶಿಕ್ಷಕರಾಗಿ ಸೇವೆಸಲ್ಲಿಸಿದ ಶ್ರೀ ಕೆ. ಭಾಗ್ಯಚಂದ್ರ ಇವರನ್ನು ಸನ್ಮಾನಿಸುವ ಸಮಾರಂಭವು ದಿನಾಂಕ 5-4-2014ರಂದು ನಡೆದ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ನೆರವೇರಿತು. ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ವೀರಪ್ಪರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಭಾಗ್ಯಚಂದ್ರ ಇವರು ಮೂಡುಶೆಡ್ಡೆಯ ಜನರ ವಿಶ್ವಾಸವನ್ನು ಗಳಿಸಿ ಶಾಲೆಯ ಏಳಿಗೆಗಾಗಿ ದುಡಿದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸನ್ಮಾನಿತರು ಉತ್ತರಿಸುತ್ತಾ ವಿವಿಧ ಕಡೆಗಳಲ್ಲಿ ಸೇವೆ ಸಲ್ಲಿಸಲು ಕಾರಣರಾದ ವಿದ್ಯಾಇಲಾಖೆ, ಆ ಊರಿನ ವಿದ್ಯಾಭಿಮಾನಿಗಳ ಸಹಕಾರವನ್ನು ಶ್ಲಾಘಿಸಿದರು. ಶಾಲಾ ಶಿಕ್ಷಕವೃಂದ, ವಿದ್ಯಾರ್ಥಿವೃಂದ, ಅಪಾರ ಸಂಖ್ಯೆಯಲ್ಲಿ ಮಕ್ಕಳ ಪೋಷಕರು ಈ ಸಂದರ್ಭದಲ್ಲಿ ಹಾಜರಿದ್ದರು.

## 'ಸಮತಾ ಬಳಗ'ದಿಂದ ಕೊಡುಗೆ



ಇತ್ತೀಚೆಗೆ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆದ 'ಸಮತಾ ಬಳಗ'ದ ಕಾರ್ಯಕ್ರಮದಲ್ಲಿ ಶ್ರೀ ಸಭಾಕ್ಕೆ ಸಂಘದ ವತಿಯಿಂದ ಹಿಂಬದಿಯ ಇಳಿಪರದೆಯನ್ನು ಕೊಡುಗೆಯಾಗಿ ನೀಡಲಾಯಿತು. ಶ್ರೀ ಸಭಾದ ಕೋಶಾಧಿಕಾರಿ ಸಾಂಕೇತಿಕವಾಗಿ ಕೊಡುಗೆಯನ್ನು ಸ್ವೀಕರಿಸಿದರು. ಸಮತಾ ಬಳಗದ ಅಧ್ಯಕ್ಷೆ ಶ್ರೀಮತಿ ಪೂರ್ಣಿಮ ಪೇಜಾವರ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

### ಯಕ್ಷಗಾನ ಸೇವೆ



ಶ್ರೀ ಹರೀಶ್ ಮಾಸ್ತರ್ ಮತ್ತು ಶ್ರೀಮತಿ ಪ್ರೇಮಲತಾರವರು ತಾ. 20-4-2014ರಂದು ತಮ್ಮ ನಿವಾಸ ಕುತ್ತಾರುಪದವುನ 'ತೇವುಲ್'ದಲ್ಲಿ ಕಟೀಲು ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಮಂಡಳಿಯಿಂದ **'ಶ್ರೀ ದೇವೀ ಮಹಾತ್ಮೆ'** ಎಂಬ ಯಕ್ಷಗಾನ ಸೇವೆ ನಡೆಸಿದರು.

## ಮಠಂತಬೆಟ್ಟುವಿಗೆ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳವರ ಭೇಟಿ



ದಿನಾಂಕ 21-3-2014ರಂದು ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನಕ್ಕೆ ತುಮಕೂರು ಜಿಲ್ಲೆಯ ಹೆಬ್ಬೂರು ಕೋದಂಡಾಶ್ರಮ ಮಠದ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳವರು ಭೇಟಿ ನೀಡಿ ಜೀರ್ಣೋದ್ಧಾರ ಕೆಲಸವನ್ನು ವೀಕ್ಷಿಸಿದರು.

### ಒಂದು ವಿಜ್ಞಾಪನೆ

'ಜ್ಞಾನಶಕ್ತಿ' ಪತ್ರಿಕೆಯನ್ನು ಆರ್ಥಿಕವಾಗಿ ಸುದೃಢಗೊಳಿಸುವ ದೃಷ್ಟಿಯಿಂದ ಸಮಾಜ ಬಾಂಧವರು ಉದಾರ ಧನಸಹಾಯವನ್ನು ಹಾಗೂ ಜಾಹೀರಾತುಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

**ಜಾಹೀರಾತು ದರ**

1) 6 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 600/-
2) 12 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 1000/-




**ಸಿ. ಯಂ. ರಾವ್ ಕಟಪಾಡಿ**
ಯಶಸ್ವಿ ವಾಸ್ತುಶಾಸ್ತ್ರಜ್ಞರು ಮತ್ತು ಜ್ಯೋತಿಷ್ಯರು



*ಶ್ರೀ ಮುರಳೀಧರ ರಾವ್*
***'ಅನುಗ್ರಹ', ಚರ್ಚ್ ರೋಡ್, ಕಟಪಾಡಿ - 574 105***
ಮೊಬೈಲ್ : 9741816166
*ತಪ್ಪದೆ ವೀಕ್ಷಿಸಿ : ಸ್ಪಂದನ ಟಿ.ವಿ. ವಾಹಿನಿಯಲ್ಲಿ 'ಈಶಾವಾಸ್ತು'*
*ಪ್ರತಿ ಭಾನುವಾರ ಪೂರ್ವಾಹ್ನ 9-00ರಿಂದ 10-00ರ ತನಕ*

*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
**Near Vijaya Pen Mart**
**Hampankatta, Mangalore - 1**



**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
**Pradeep Rao K.**
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–



**ಶ್ರೀಮತಿ ಕುಸುಮ ನವೀನ್ ಕುಮಾರ್**
**ಶ್ರೀಮತಿ ರೇಷ್ಮ, ಶ್ರೀ ವಸಂತ್ ಕುಮಾರ್, ಅನೀಶ್ ರಾವ್**
**ಶ್ರೀಮತಿ ಸುಶ್ಮ, ಶ್ರೀ ಶಿವಾನಂದ ರಾವ್ ಹಾಗೂ ಅಂಜನ್ ರಾವ್**

**PREETHIKA AUTOMOBILES**
☏ 2493633 9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
*Dealers in :*
**Minda Switches, M. K. Products, Swiss Auto Products, Power Coils**

ಎಲ್ಐಸಿ ಪಾಲಿಸಿಗಳ ಪುನರುಜ್ಜೀವನ (Lapsed Policy Revival) ಕ್ಲೈಮ್, ಸರೆಂಡರ್, ಲೋನ್, ನಾಮಿನೇಶನ್ ಇತ್ಯಾದಿ ಸರ್ವೀಸ್‌ಗಳನ್ನು ನೀಡಲಾಗುವುದು ಹಾಗೂ ಇಚ್ಛೆಪಟ್ಟಲ್ಲಿ ಅವರಿಗೆ ಹೊಂದಿಕೆಯಾಗುವಂತಹ ಹೊಸ ಪಾಲಿಸಿಗಳನ್ನು ಮಾಡಿಕೊಡಲಾಗುವುದು. ಅಲ್ಲದೆ ಮೋಟರ್ ವೆಹಿಕಲ್ ಇನ್ಶೂರೆನ್ಸ್, ಹೆಲ್ತ್ ಇನ್ಶೂರೆನ್ಸ್, ಪಾನ್ ಕಾರ್ಡ್ ಹಾಗೂ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಮಾಡಿಕೊಡಲಾಗುವುದು.
*ಸಂಪರ್ಕಿಸಿರಿ :*
LIC
**ಪಿ. ರಾಜೇಂದ್ರ ರಾವ್**, ಬಿ.ಎಸ್ಸಿ.
**ಕುಂಜತ್ತಬೈಲ್, ಮಂಗಳೂರು, ಮೊಬೈಲ್ : 9242214842**

Phone : 0824 - 2440110, 2213946
**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
***Authorised Dealers for :***
**Vijai Super GP 150 &**
**Vikram 3 Wheelers (Petrol & Diesel)**



**Prakash Rao** **Mob : 8453679734, 9986071684**



**KRISHNA ELECTRONICS**
*Dealers in :*
***Electronic Spares & T.V, VCD, DVD etc Service Centre,***
***Car Cds, Speaker, Sub Woofers, USB Players C.C Camers***
**OppService Bus Stand, Rao & Rao Circle, City Towers**
**MANGALORE - 575 003**



# ಮರಳಿನ ಮನೆ



ಆ ಒಂದು ಸುಂದರ ಸಂಜೆ. ಸಂಧ್ಯಾ ಕಾಲದ ನೇಸರನ ಕೆಲವು ಕಿರಣಗಳು ಬಾನನ್ನು ಚುಂಬಿಸುತ್ತಿದ್ದವು. ಭಾಸ್ಕರನು ಒಂದು ಕುಂಕುಮದ ಬೊಟ್ಟಿನಂತೆ ಗೋಚರಿಸುತ್ತಿದ್ದನು. ವಾರಿಧಿಯ ಅಲೆಗಳು ಕಡಲ ತೀರಕ್ಕೆ ಅಪ್ಪಳಿಸುತ್ತಿದ್ದವು. ಮರಳಿನ ಕಣಗಳು ಕಾಲಿಗೆ ಚುಚ್ಚುತ್ತಿದ್ದಂತೆ ನಾನು ಮೆಲ್ಲನೆ ಮುಂದಕ್ಕಡಿಯಿಟ್ಟು ಸಾಗರದ ಪಕ್ಕದ ಒಂದು ಪುಟ್ಟ ಕಲ್ಲು ಬಂಡೆಯ ಮೇಲೆ ಕುಳಿತುಕೊಂಡೆನು.

ಹಾಗೆಯೇ ನನ್ನ ದೃಷ್ಟಿ ಪಕ್ಕಕ್ಕೆ ಹೊರಳಿತು. ಅಲ್ಲೊಂದು ಸುಂದರ ಸಂಸಾರ. ತಂದೆ, ತಾಯಿ, ಚಿಕ್ಕ ಮಗು. ಆ ಪುಟ್ಟ ಮಗು ಮರಳಿನ ಜೊತೆ ಆಟವಾಡುತ್ತಿತ್ತು. ನನ್ನ ದೃಷ್ಟಿಯನ್ನು ಮತ್ತೊಂದು ಕಡೆ ಹಾಯಿಸಿದೆ. ಅಲ್ಲಲ್ಲಿ ಐಸ್ ಕ್ರೀಂ, ಚುರುಮುರಿ, ಕಡಲೆಕಾಯಿ ಮಾರುವವರ, ಕೊಳ್ಳುವವರ ವ್ಯವಹಾರಗಳು ಮುಂದುವರಿಯುತ್ತಿದ್ದುವು. ತಂಗಾಳಿಯು ತಣ್ಣನೆ ಬೀಸಿ ಮೈ ಮನಕ್ಕೆ ಮುದವನ್ನುಂಟು ಮಾಡುತ್ತಿತ್ತು. ಬೆಳ್ಳಿ ಮೋಡಗಳು ಸೂರ್ಯನನ್ನು ಮರೆಮಾಚಲು ಸ್ಪರ್ಧಿಸುತ್ತಿದ್ದವು. ಅನತಿ ದೂರದಲ್ಲೊಂದು ಹಾಯಿ ದೋಣಿಯು ಶರಧಿಯ ಜಲಧಾರೆಗಳ ನಡುವೆ ಆಚೀಚೆ ತೂಗಾಡುತ್ತಿತ್ತು. ಹಡಗೊಂದು ದೂರದಲ್ಲಿ ಒಂದು ಕಪ್ಪು ಚುಕ್ಕೆಯಂತೆ ಕಾಣಿಸುತ್ತಿತ್ತು. ಕೆಲವು ಹಕ್ಕಿಗಳು ಗುಂಪುಗೂಡಿಕೊಂಡು ತಮ್ಮ ತಮ್ಮ ಗೂಡಿನೆಡೆಗೆ ಹಾರುತ್ತಿದ್ದವು. ಅಂತೂ ಒಟ್ಟಿನಲ್ಲಿ ಕಡಲ ತಡಿಯ ಬಾನಂಗಳದ ನೋಟವು ನಯನ ಮನೋಹರವಾಗಿ ಗೋಚರಿಸುತ್ತಿತ್ತು.


ಪುನಃ ನನ್ನ ನೋಟವನ್ನು ಪಕ್ಕದ ಸಂಸಾರದ ಕಡೆ ಹೊರಳಿಸಿದೆ. ಆ ಪುಟ್ಟ ಮಗು ಮರಳಿನಲ್ಲಿ ಮನೆಯೊಂದನ್ನು ನಿರ್ಮಿಸುತ್ತಿತ್ತು. ಆದರೆ ಸಾಗರದಲೆಗಳ ರಭಸಕ್ಕೆ ಆ ಪುಟ್ಟ ಮನೆ ಪೂರ್ತಿಗೊಳ್ಳುವ ಮೊದಲೇ ಕುಸಿದು ಬೀಳುತ್ತಿತ್ತು. ಮಗುವೂ ಕೂಡಾ ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿತ್ತು. ಅಂತೂ ಇಂತೂ ಕೊನೆಗೆ ಆ ಮಗುವು ಯಶಸ್ವಿಯಾಗಿ ಒಂದು ಪುಟ್ಟ ಮನೆಯನ್ನು ನಿರ್ಮಾಣ ಮಾಡಿತು. ಅಷ್ಟರಲ್ಲಿ ರಭಸವಾಗಿ ಬಂದ ಅಲೆಯೊಂದು ತೀರಕ್ಕಪ್ಪಳಿಸಿ ಆ ಮನೆಯನ್ನು ನುಚ್ಚು ನೂರು ಮಾಡಿತು. ಇದರಿಂದ ತೀವ್ರವಾಗಿ ಘಾಸಿಗೊಂಡ ಆ ಪುಟ್ಟ ಮಗುವು ಅಳತೊಡಗಿತು. ಅಷ್ಟರಲ್ಲಿ ಕತ್ತಲಾಗತೊಡಗಿತು.

ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ತಮ್ಮ ಗೂಡಿನತ್ತ ಪಯಣ ಬೆಳೆಸಲಾರಂಭಿಸಿದವು. ಜನರೂ ಕೂಡಾ ಅಲ್ಲಲ್ಲಿ ಗುಂಪುಗೂಡಿಕೊಂಡಿದ್ದವರು ಚದುರಿ ತಮ್ಮ ತಮ್ಮ ನಿವಾಸಗಳತ್ತ ತೆರಳಲಾರಂಭಿಸಿದರು. ಅಳುತ್ತಿದ್ದ ಆ ಪುಟ್ಟ ಮಗುವಿನ ತಂದೆ ತಾಯಿಗಳು ಆ ಮಗುವನ್ನು ಸಮಾಧಾನಪಡಿಸುತ್ತಾ ಮನೆಗೆ ಕರೆದೊಯ್ಯತೊಡಗಿದರು. ನಾನೂ ಕೂಡಾ ಆ ಮುಗ್ಧ ಮಗುವಿನ ಮನಕ್ಕಾದ ನೋವನ್ನೆಣಿಸುತ್ತಾ ನನ್ನ ಮನೆಯ ಕಡೆ ಹೆಜ್ಜೆ ಹಾಕಿದೆ.

***– ವೀಣಾ ರಾವ್ ಯಂ. ಪಿ.***

D/o. ಶ್ರೀ ಡಿ. ಪದ್ಮನಾಭ ರಾವ್
'ವಿನಾಯಕ ಕೃಪಾ', ಶಿವಾಜಿನಗರ, ವಿಟ್ಲ, ದ. ಕ.

# ಶ್ರೀರಾಮ ನವಮಿ ಆಚರಣೆ



ದಿನಾಂಕ 8-4-2014ರ ಮಂಗಳವಾರ ಬೆಳಗ್ಗೆ ಕಾರ್ಕಳ ಜೋಗುಳಬೆಟ್ಟುನಲ್ಲಿ ಶುದ್ಧ ಪುಣ್ಯಾಹದೊಂದಿಗೆ ಗಣಹೋಮ, ನಾಗಾರಾಧನೆ ಹಾಗೂ ಏಕಾದಶ ರುದ್ರಾಭಿಷೇಕ ನೆರವೇರಿಸಿ, ಸಹಸ್ರಾರ್ಚನೆಯೊಂದಿಗೆ ಶ್ರೀ ರಾಮಚಂದ್ರನಿಗೆ ಪೂಜಾದಿಗಳು ನಡೆದವು. ಈ ಮಧ್ಯೆ ಶ್ರೀಮತಿ ಸಾವಿತ್ರಿ ಮನೋಹರ ರಾವ್ ನೇತೃತ್ವದಲ್ಲಿ ಶ್ರೀ ಶಾರದಾ ಭಜನಾ ಮಂಡಳಿ, ಅನಂತಶಯನ, ಕಾರ್ಕಳ ಇವರಿಂದ ಸುಶ್ರಾವ್ಯವಾದ ಭಜನಾ ಕಾರ್ಯಕ್ರಮ ನಡೆಯಿತು. ಸಂಜೆ ಶ್ರೀ ದುರ್ಗಾ ನಮಸ್ಕಾರ ಪೂಜೆಯನ್ನು ಕೂಡಾ ನಡೆಸಲಾಯಿತು.

ಪುರೋಹಿತರುಗಳಾದ ಶ್ರೀ ದೇವರಾಜ ಹೆಬ್ಬಾರ, ಪಾವಂಜೆ ಮತ್ತು ಶ್ರೀ ಕೃಷ್ಣರಾಜ ಭಟ್ ಹೆಜಮಾಡಿಯವರು ಪೂಜಾ ಕೈಂಕರ್ಯಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು. ಪರಪ್ಪು ಶ್ರೀ ರತ್ನಾಕರ ರಾವ್‌ರವರು ಪಾರಾಯಣ ಪಠಣಕ್ಕೆ ಸಹಕರಿಸಿದರು. ಕುಟುಂಬದ ಹಿರಿಯರಾದ ಶ್ರೀ ಗೋಪಾಲಕೃಷ್ಣ ಕೋಲ್ಪೆ ದಂಪತಿಗಳ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಧ್ಯಾನಮಂದಿರದ ಶ್ರೀ ಶಶಿಧರ ರಾವ್ ಹಾಗೂ ಶ್ರೀ ಚಂದ್ರಶೇಖರ ರಾವ್‌ರವರು ಸಹಕರಿಸಿದರು.

***ವರದಿ : ಶ್ರೀ ಜಿ. ಕೆ. ಕೋಲ್ಪೆ, ಉಡುಪಿ***


# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ

**ಶ್ರೀಯುತ ಪೆರುವಾಜೆ ಶಿವರಾವ್**ರವರು ದಿನಾಂಕ 8-4-2014ರಂದು ಪೂರ್ವಾಹ್ನ ಅಲ್ಪಕಾಲದ ಅನಾರೋಗ್ಯದಿಂದ ತನ್ನ 87ನೇ ವಯಸ್ಸಿನಲ್ಲಿ ನಿಧನರಾದರು. ಶ್ರೀಯುತರು ಇಬ್ಬರು ಪುತ್ರರು, ಒಬ್ಬ ಪುತ್ರಿ, ಮೊಮ್ಮಕ್ಕಳು ಮತ್ತು ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರು ನಿವೃತ್ತ ಶಿಕ್ಷಕರಾಗಿದ್ದು, ಉತ್ತಮ ಕೃಷಿಕರೂ ಆಗಿದ್ದರು.

❊ ❊ ❊

ಮೂಲ್ಕಿ ಮೂಲದ ಶಿವಮೊಗ್ಗದಲ್ಲಿ ನೆಲೆಸಿದ್ದ ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿ **ನಂದಾವರ ಶಿವಶಂಕರ ರಾವ್** (61) ಹೃದಯಾಘಾತದಿಂದ ದಿನಾಂಕ 15–4–2014ರಂದು ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

## ಹಣ್ಣು



ಹಣ್ಣು ಹಣ್ಣು ಹಣ್ಣು
ಅಮ್ಮನಿಗೆ ಬಾಳೇಹಣ್ಣು
ಅಪ್ಪನಿಗೆ ಪೇರಳೇಹಣ್ಣು
ಅಜ್ಜಿಗೆ ದ್ರಾಕ್ಷಿ ಹಣ್ಣು
ಅಜ್ಜನಿಗೆ ಹಲಸಿನ ಹಣ್ಣು
ಅಕ್ಕನಿಗೆ ಸೇಬುಹಣ್ಣು
ಅಣ್ಣನಿಗೆ ಕಿತ್ತಳೆಹಣ್ಣು
ನನಗೆ ಮಾತ್ರ ಮಾವಿನಹಣ್ಣು

***ಅಪೂರ್ವ ರಾವ್ ಯಂ.ಯಸ್.**, 3ನೇ ತರಗತಿ*
*D/o. ಶ್ರೀಮತಿ ವೀಣಾ ರಾವ್*
*'ವಿನಾಯಕ ಕೃಪಾ', ಶಿವಾಜಿನಗರ, ವಿಟ್ಲ*

# ಶ್ರೀ ಮ. ನಾ. ಹೆಬ್ಬಾರರ ಹರಿಕಥಾ ಕಾರ್ಯಕ್ರಮ

ನಿವೃತ್ತ ಉಪನ್ಯಾಸಕರೂ, ಪ್ರಸಿದ್ಧ ಹರಿದಾಸರೂ, ಯಕ್ಷಗಾನ ಕಲಾವಿದ, ಸಾಹಿತಿಗಳೂ ಆದ ಶ್ರೀ ಮ.ನಾ. ಹೆಬ್ಬಾರರಿಂದ ತಾ. 31–03–2014ರಂದು ಯುಗಾದಿಯ ಶುಭಸಂದರ್ಭದಲ್ಲಿ, ನಿಟ್ಟೆ ಶಿಕ್ಷಣ ಸಂಕೀರ್ಣದ ಮಧ್ಯೆ ಇರುವ ಶ್ರೀ ಮಹಾಗಣಪತಿ ದೇವಾಲಯದಲ್ಲಿ ಗಣಪತಿಯ ಪ್ರತಿಷ್ಠಾ ವರ್ಧಂತಿ ಸಮಾರಂಭದ ಅಂಗವಾಗಿ 'ಭಕ್ತ ಚಂದ್ರಹಾಸ' ಎಂಬ ಕಥಾಭಾಗದ ಹರಿಕಥೆಯು ಜರಗಿತು. ಶ್ರೀ ಕೆ. ಶ್ರೀನಿವಾಸ ರಾವ್‌ರವರು ಹಾರ್ಮೋನಿಯಂನಲ್ಲಿಯೂ, ಶ್ರೀ ಕೆ. ರಾಮಪ್ರಸಾದ ಕಂಗಿನ್ನಾಯರು ತಬಲಾದಲ್ಲಿಯೂ ಸಹಕರಿಸಿದ್ದರು. ಆರಂಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಚಿಪ್‌ಳೂಣ್‌ಕರ್‌ರವರು ಹರಿದಾಸರಿಗೆ ಹಾರಾರ್ಪಣೆ ಮಾಡಿದರು. ಶ್ರೀ ದಿವಾಕರ ಭಟ್‌ರವರು ಆರಂಭದಲ್ಲಿ ಸ್ವಾಗತಿಸಿ, ಧನ್ಯವಾದವಿತ್ತು, ಹರಿಕಥಾ ತಂಡದವರನ್ನು ಗೌರವಿಸಿದರು.



## ವಧೂವರರ ವಿವಾಹ ವೇದಿಕೆ

**ನಮ್ಮ ಸಮಾಜ ಬಾಂಧವರ ಗಮನಕ್ಕೆ -**

ವಧೂವರರ ವಿವಾಹ ವೇದಿಕೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪ್ರಾರಂಭಿಸಿ, ಇದರ ಉಪಯುಕ್ತತೆಯನ್ನು ನಮ್ಮ ಸಮಾಜ ಬಾಂಧವರು ಪಡೆದುಕೊಂಡಿದ್ದಾರೆ. ಇನ್ನು ಮುಂದೆಯೂ ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬಹುದು.

*ಸಂಪರ್ಕಿಸಿರಿ :* **ಶ್ರೀ ಚೇತನ್ ಶರ್ಮ : 9844187083**
**ಶ್ರೀ ಎನ್. ಶಶಿಕಾಂತ್ ರಾವ್ : 9341988753**
**ಶ್ರೀಮತಿ ವೈಜಯಂತಿ ರಾವ್ ಬೆಳ್ಳೆ : 9242204848**

E-mail : gbicsm@gmail.com



# ಚಿಣ್ಣರ ಆರ್ಟ್ ಗ್ಯಾಲರಿ






**ಅನುಜ್ಞಾ**
*ಶ್ರೀದೇವಿ ನರ್ಸರಿ ಸ್ಕೂಲ್*
*ಕಿನ್ನಿಗೋಳಿ*



**ರಮ್ಯಶ್ರೀ**, *6ನೇ ತರಗತಿ*
*ಸೈಂಟ್ ಆನ್ಸ್ ಸ್ಕೂಲ್*
*ಕಡಬ*



**ಕೃಪಾಲ್**, *5ನೇ ತರಗತಿ*
*ಎಸ್.ಆರ್. ಪಬ್ಲಿಕ್ ಸ್ಕೂಲ್, ಹೆಬ್ರಿ*




**ಅನನ್ಯಾ ರಾವ್**, *2ನೇ ತರಗತಿ*



**ಅನಘಾ ರಾವ್**, *6ನೇ ತರಗತಿ*

ಜ್ಞಾನಶಕ್ತಿ **'ಚಿಣ್ಣರ ಆರ್ಟ್ ಗ್ಯಾಲರಿ'**ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ.

**ನಮ್ಮ ವಿಳಾಸ :**
**ಅಂಚೆ ಪೆಟ್ಟಿಗೆ ನಂ. 206**
**ದರ್ಬೆ - 574 202, ಪುತ್ತೂರು, ದ. ಕ.**




## ಜ್ಞಾನ – ನುಡಿ

ಒಂದು ಕಾಸು ದಾನ ಮಾಡುವವನನ್ನೂ ನಾವು ಗೌರವಿಸಬೇಕು. ಆದರೆ ದೊಡ್ಡ ಸಂಪತ್ತಿನ ಒಡೆಯನಾದ ಜಿಪುಣನನ್ನು ಗೌರವಿಸುವ ಅಗತ್ಯವಿಲ್ಲ.

– ***ಪಂಚತಂತ್ರ***

## ಜ್ಞಾನ – ಗಾದೆ

ಒರಿ ಗೂಂಜಿಟ್‌ತ್ ಬುಡಯೆ ಒರಿ ರಚ್ಚೆಟ್‌ತ್ ಬುಡಯೆ
ಒಂತೆ ತೆರಿನಾಯಗ್ ಅಹಂಕಾರ ಜಾಸ್ತಿ
ಒಂಜಿ ಪೊರ್ತು ಉಂಡುಂಡ ಆಪತ್ತ್ ಕಡಿಮೆ

## ಜ್ಞಾನ – ನಗೆ

**ಡೋಂಟ್ ಡಿಸ್ಟರ್ಬ್!**

ವ್ಯಕ್ತಿಯೊಬ್ಬನ ಟೀ ಶರ್ಟ್ ಹಿಂದೆ ಹೀಗೆ ಬರೆದಿತ್ತು :
ನನ್ನನ್ನು ಯಾರೂ ಡಿಸ್ಟರ್ಬ್ ಮಾಡಬೇಡಿ... ಏಕೆಂದರೆ ನಾನು ವಿವಾಹಿತ.
ಈಗಾಗಲೇ ಸಾಕಷ್ಟು ಡಿಸ್ಟರ್ಬ್ ಆಗಿದ್ದೇನೆ!

## ಜ್ಞಾನ – ವಿಸ್ಮಯ

**ಮಹಾಭಾರತ 18ರ ಆಟ**

ಅಧ್ಯಾಯಗಳು 18, ಸಮರ ನಡೆದದ್ದು 18 ದಿನ,
ಪಾಲ್ಗೊಂಡ ಸೈನ್ಯ 18 ಅಕ್ಷೋಹಿಣಿ ಸೈನ್ಯ. ಒಂದು ಅಕ್ಷೋಹಿಣಿ ಸೈನ್ಯದ ವಿವರ :

1. ಆನೆಗಳು : 21,870.2+1+8+7+0 = 18
2. ರಥಗಳು : 21,870 2+1+8+7+0 = 18
3. ಕುದುರೆಗಳು : 65,610 6+5+6+1+0 = 18

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*